ಇ) ಈ ಕೆಳಕಂಡಂತೆ ಒಟ್ಟು ಅಡಿಗೆ ಕೇಂದ್ರಗಳಲ್ಲಿ ಪಾಠಶಾಲೆ ಹಾಗೂ ಇತರೆ ಸಲಕರಣೆಗಳು ಸದ್ಯಕ್ಕೆ ಇರುವುದಿಲ್ಲ.

1)	ಅಡಿಗೆ ಕೇಂದ್ರಗಳು	4825
2)	ಪಾತ್ರೆಗಳು	6990
3)	ಗ್ಯಾಸ್	4167
4)	ಸ್ಟೌವ್‌ಗಳು	4290
5)	ನೀರಿನ ವ್ಯವಸ್ಥೆ	7889
6)	ಅಡಿಗೆಯವರ ನೇಮಕಾತಿ ಆಗದೇ ಇರುವುದು	1595

ಇನ್ನು ಒಂದೆರಡು ವಾರದಲ್ಲಿ ಎಲ್ಲಾ ಕೇಂದ್ರಗಳಿಗೂ ಎಲ್ಲಾ ಅಗತ್ಯ ಸಾಮಗ್ರಿಗಳು ಸರಬರಾಜಾಗುವುದು ಹಾಗೂ ಅಡಿಗೆಯವರ ನೇಮಕ ಆಗಲಿದೆ.

ಈ) ಪಾಠ ಪ್ರವಚನಗಳಿಗೆ ಆಡಚಣೆಯಾಗದ ಹಾಗೆ ಅಕ್ಷರ ದಾಸೋಹ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಊಟ ಬಡಿಸುವ ಮುನ್ನ ಪರಿಶೀಲಿಸಿ ಮಕ್ಕಳ ಊಟ ಮಾಡುವುದರ ಮೇಲುಸ್ತುವಾರಿ ನೋಡಿಕೊಳ್ಳಲು ತಿಳಿಸಿದೆ.

ರಾಜ್ಯದಲ್ಲಿ ಹೊಸ ಸರ್ಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸುವುದು

4105 (4551) : ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಈ ವರ್ಷದಲ್ಲಿ ಎಷ್ಟು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಇಲಾಖೆಯಿಂದ ಪ್ರಸ್ತಾವನೆ ಬಂದಿವೆ:

ಆ) ಪ್ರಸ್ತಾವನೆಯಲ್ಲಿ ಎಷ್ಟು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಈ ವರ್ಷದಲ್ಲಿ 282 ಪ್ರಸ್ತಾವನೆಗಳು ಬಂದಿದೆ.

ಆ) 74 ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆಯಾದ ಹಣ

4106 (4552) : ಶ್ರೀ ನೀಲಕಂಠಪ್ಪ ಬಿ.ಆರ್ (ತರೀಕೆರೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುವೆಂಪು ವಿಶ್ವವಿದ್ಯಾಲಯಕ್ಕೆ ರಾಜ್ಯ ಸರ್ಕಾರದಿಂದ ಕಟ್ಟಡಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಹಣವೆಷ್ಟು;

ಆ) ಇದೇ ರೀತಿ ಕೇಂದ್ರ ಧನ ಸಹಾಯ ಆಯೋಗ (U.G.C) ಯಿಂದ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾದ ಹಣವೆಷ್ಟು; ಪೂರ್ಣ ವಿವರದೊಂದಿಗೆ ಮಾಹಿತಿ ನೀಡುವುದು;

ಇ) ಯು.ಜಿ.ಸಿ. ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಹಣ ಪೂರ್ಣ ಬಳಕೆಯಾಗಿದೆಯೆ: ಉಳಿದಿರುವ ಹಣವೆಷ್ಟು: